**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.418/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | ಪ್ರಶಾಂತ ಹರಿಜನ | ಸಿಡಬ್ಲ್ಯೂ | 10 |
| ತಂದೆ ಹೆಸರು | ಬಸವರಾಜ | ಪಿಡಬ್ಲ್ಯೂ | 6 |
| ವಯಸ್ಸು | 41 ವರ್ಷ | | |
| ಉದ್ಯೋಗ | ಗುತ್ತಿಗೆದಾರ | | |
| ವಾಸಸ್ಥಳ | ಹಿರೇಕೆರೂರ | | |

**ದಿಃ 04.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1). ನನಗೆ ಚಾ.ಸಾ-1,8,9,11,12 ಮತ್ತು 1 ನೇ ಆರೋಪಿಯ ಪರಿಚಯ ಇರುವದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ ಠಾಣೆಗೆ ಹೋಗಿ ಯಾಹಿದೇ ಹೇಳಿಕೆ ಕೊಟ್ಟಿಲ್ಲ ಮತ್ತು ಈ ಪ್ರಕರಣದ ಕುರಿತಾಗಿ ನನಗೆ ಸ್ವಂತಕ್ಕೆ ಮಾಹಿತಿ ಇರುವದಿಲ್ಲ. 1 ನೇ ಆರೋಪಿಯನ್ನು ಮೊದಲನೇ ಬಾರಿಗೆ ಇದೇ ದಿವಸ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ಚಾ.ಸಾ-1 ಮತ್ತು 1 ನೇ ಆರೋಪಿಯ ನಡುವೆ ಆದ ವ್ಯವಹಾರದ ಕುರಿತಾಗಿ ನನಗೆ ಮಾಹಿತಿ ಇರುವದಿಲ್ಲ .

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಹಿ.ಸ.ಸ.ಅಭಿಯೋಜಕರಿಂದ.**

2) ದಿನಾಂಕಃ 12.12.2016 ರಂದು ಪೊಲೀಸರ ಮುಂದೆ ನಾನು ಕೊಟ್ಟಂತಹ ಸಾಕ್ಷಿಗೆ ಒದಿ ಹೇಳಿ ಕೇಳಲಾಗಿ ಸಾಕ್ಷಿಯು ಆ ಕುರಿತಾಗಿ ಯಾವುದೇ ಸಾಕ್ಷವನ್ನು ಒಪ್ಪಿಕೊಂಡಿರುವದಿಲ್ಲ. ಅದ್ದರಿಂದ ಹೇಳಿಕೆಯನ್ನು ನಿ.ಪಿ-10 ಎಂದು ಗುರುತಿಸಲಾಯಿತು. 1 ನೇ ಆರೋಪಿ ನನಗೆ ಪರಿಚಯ ಇರುವದರಿಂದ ನನಗೆ ಈ ಪರಕರಣದಲ್ಲಿ ಆದಂತಹ ವ್ಯವಹಾರದ ಕುರಿತಾಗಿ ನನಗೆ ಮಾಹಿತಿ ಇದ್ದರೂ ಸಹ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಸಿ.ಡಬ್ಲೂ-10, ಪಿ.ಡಬ್ಲೂ-6

**ಆರೋಪಿ ಪರವಾಗಿ ಪಾಟೀ ಸವಾಲು ಇರುವದಿಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.

ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು

ಹಾವೇರಿ.